# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ –153 ಜಯನಗರ ವಾರ್ಡ್ ಸಭೆಯ ನಡವಳಿ

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಜಯನಗರ ವಾರ್ಡ್–153 ರಲ್ಲಿ ವಾರ್ಡ್ ಸಭೆಯನ್ನು ಮಾನ್ಯ ಶ್ರೀಮತಿ. ವರಲಕ್ಷ್ಮಮ್ಮ ಎಲ್. ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರ ಅಪ್ಪಣೆ ಮೇರೆಗೆ ದಿನಾಂಕ:03/12/2021 ಶುಕ್ರವಾರದಂದು ಮಧ್ಯಾಹ್ನ 3.00 ಗಂಟೆಗೆ ವಾರ್ಡ್ ಕಮಿಟಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸದಸ್ಯರಿಗೆ ಆಹ್ವಾನ ನೀಡಿದ್ದು, ಸಭೆಗೆ ಹಾಜರಾಗಿರುವ ಎಲ್ಲರಿಗೂ ಸ್ವಾಗತ ಕೋರುತ್ತಾ, ಸಭೆಯನ್ನು ನಡೆಸಲಾಯಿತು.

**ಹಾಜರಿದ್ದವರು:–**

1. ಶ್ರೀಮತಿ. ವರಲಕ್ಷ್ಮಮ್ಮ ಎಲ್. ನೋಡಲ್ ಅಧಿಕಾರಿ ರವರು.
2. ಶ್ರೀ. ನವೀನ್‌ಕುಮಾರ್ ಕೆ. ಕಿರಿಯ ಅಭಿಯಂತರರು.
3. ಶ್ರೀ. ವಿಜಯಕುಮಾರ್ ಜಿ. ಕಿರಿಯ ಅಭಿಯಂತರರು (ಬೆಸ್ಕಾಂ)
4. ಶ್ರೀ. ಮಲ್ಲಿಕಾರ್ಜುನ ಗೌಡ, ಜಲ ಪರಿವೀಕ್ಷಕರು.
5. ಶ್ರೀ. ನಾರಾಯಣಸ್ವಾಮಿ, ಮೌಲ್ಯ ಮಾಪಕರು,
6. ಶ್ರೀ. ವಿಜಯಕುಮಾರ್ ಕೆ.ಆರ್ ಕಿರಿಯ ಆರೋಗ್ಯ ಪರಿವೀಕ್ಷಕರು.
7. ಶ್ರೀ. ಮುನಿವೆಂಕಟಪ್ಪ ಎ.ಎಸ್.ಐ, ಮೈಕೋ ಲೇಔಟ್ ಸಂಚಾರ ಪೊಲೀಸ್ ಠಾಣೆ.
8. ಶ್ರೀ. ಮಣಿಕಂಠಸ್ವಾಮಿ ಪಿ. ಮಾರ್ಷಲ್,
9. ಶ್ರೀ. ಬಹದ್ದೂರ್ ಭೀಮಪ್ಪ, ಶ್ರೀ. ಎಂ.ಎಸ್. ಪ್ರಕಾಶ್. ಶ್ರೀ. ಜಯಕೃಷ್ಣನ್, ಶ್ರೀ. ಮೊಹಮ್ಮದ್ ಸಲಾವುದ್ದಿನ್, ಶ್ರೀ ಅನೀಸ್ ಅಹಮದ್ & ಶ್ರೀ/ಶ್ರೀಮತಿ. ಶಾನ್ ಅಹಮದ್ ಸಾರ್ವಜನಿಕರು.

*********

1. ವಾರ್ಡ್–153 ರ ಕುಂದು ಕೊರತೆಗಳ ಬಗ್ಗೆ ಚರ್ಚಿಸುವ ಸಂಬಂಧ ದಿನಾಂಕ:03/12/2021 ಶುಕ್ರವಾರದಂದು ಮಧ್ಯಾಹ್ನ 3.00 ಗಂಟೆಗೆ ನಿಗದಿತ ಸಮಯಕ್ಕೆ ಸಭೆಯನ್ನು ಪ್ರಾರಂಭಿಸಲಾಯಿತು.



Scanned with CamScanner

2. ವಾರ್ಡಿನ ಸ್ಥಳೀಯರಾದ ಶ್ರೀ. ಜಯಕೃಷ್ಣ ರವರು ಮಾತನಾಡಿ ಬಿ.ಹೆಚ್.ಇ.ಎಲ್ ಲೇಔಟ್‌ನ ಶೆಡ್ ಮತ್ತು ಪಾರ್ಟಿಹಾಲ್‌ಗಳ ಬಗ್ಗೆ ಪ್ರಸ್ತಾಪಿಸಿ ಮಾನ್ಯ ನ್ಯಾಯಾಲಯದ ಆದೇಶದಂತೆ ಕ್ರಮ ಕೈಗೊಳ್ಳಲು ಕೋರಿದರು. ಈ ಬಗ್ಗೆ ವಾರ್ಡ್ ಅಭಿಯಂತರರು ಮಾತನಾಡಿ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರೊಂದಿಗೆ ಚರ್ಚಿಸಿ ನ್ಯಯಾಲಯದ ಆದೇಶದಂತೆ ಅಗತ್ಯ ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.

ಕ್ರಮ : ಸ.ಕಾ.ನಿ.ಅ (ಹೊಂಬೇಗೌಡನಗರ)

3. ನೋಡಲ್ ಅಧಿಕಾರಿಯವರು ಮಾತನಾಡಿ ವಾರ್ಡ್ ವ್ಯಾಪ್ತಿಯ ಕೊಳಚೆ ಪ್ರದೇಶಗಳಲ್ಲಿ ಹಾಗೂ ವಸತಿ ಸಮುಚ್ಛಯಗಳು ಹಾಗೂ ವಸತಿ ಪ್ರದೇಶಗಳಲ್ಲಿ ಸಾಂಕ್ರಾಮಿಕ ರೋಗಗಳಾದ ಡೆಂಗ್ಯೂ ಮಲೇರಿಯಾ ಚಿಕುಂಗುನ್ಯ ಹರಡದಂತೆ ಔಷದಿ ಸಿಂಪಡಿಸುವಂತೆ ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಿದರು.

ಕ್ರಮ : ಸ.ಕಾ.ನಿ.ಅ (ಘನತ್ಯಾಜ್ಯ ನಿರ್ವಹಣೆ)
ಆರೋಗ್ಯ ವೈದ್ಯಾಧಿಕಾರಿಗಳು (ಚಿಕ್ಕಪೇಟೆ)

4. ವಾರ್ಡ್ 153ರ ಸ್ಥಳೀಯರಾದ ಡಾ|| ಎಂ.ಎಸ್. ಪ್ರಕಾಶ್ ರವರು ಮಾತನಾಡಿ 7ನೇ ಅಡ್ಡರಸ್ತೆ, 2ನೇ ಬ್ಲಾಕ್ ಜಯನಗರ, ಬೆಂಗಳೂರು ಇಲ್ಲಿನ ಜನತಾ ಗ್ಯಾರೇಜ್ ಮುಂದೆ ಅನಧಿಕೃತವಾಗಿ ದ್ವಿಚಕ್ರ ವಾಹನಗಳನ್ನು ನಿಲ್ಲಿಸುತ್ತಿರುವುದರಿಂದ ಸಾರ್ವಜನಿಕ ಸಂಚಾರಕ್ಕೆ ಅಡಚಣೆ ಉಂಟಾಗಿರುವುದರಿಂದ ಇವುಗಳನ್ನು ತೆರವುಗೊಳಿಸಲು ಕೋರಿದರು. ಈ ಬಗ್ಗೆ ವಾರ್ಡ್ ಅಭಿಯಂತರರು ಮಾತನಾಡಿ ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ವಾರ್ಡ್ ಮಾರ್ಷಲ್ ರವರನ್ನು ಕೂಡಲೇ ಸದರಿ ಸ್ಥಳಕ್ಕೆ ತೆರಳಿ ಸಂಬಂಧಪಟ್ಟ ಗ್ಯಾರೇಜ್ ಮಾಲೀಕರಿಗೆ ವಾಹನ ತೆರವುಗೊಳಿಸಲು ಸೂಚನೆ ನೀಡುವಂತೆ ತಿಳಿಸಿದರು. ಅದರಂತೆ ಕೂಡಲೇ ಸದರಿಯವರು ಸ್ಥಳಕ್ಕೆ ತೆರಳಿ ಅನಧಿಕೃತ ವಾಹನಗಳನ್ನು ತೆರವುಗೊಳಿಸುವಂತೆ ಮಾಲೀಕರಿಗೆ ಸೂಚಿಸಿರುತ್ತಾರೆ.

ಕ್ರಮ : ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷರು
ಮತ್ತು ಮಾರ್ಷಲ್ ರವರು



Scanned with CamScanner

5. ವಾರ್ಡ್ 153ರ ಸ್ಥಳೀಯರಾದ ಶ್ರೀಮತಿ. ಶಾನ್ ಅಹಮದ್ ರವರು ಮಾತನಾಡಿ ಎಂ.ಡಿ. ಬ್ಲಾಕ್ ಸುತ್ತ-ಮುತ್ತ ಕಸ ತೆರವುಗೊಳಿಸುವ ಬಗ್ಗೆ ಹಾಗೂ ಕಟ್ಟಡದ ಅವಶೇಷಗಳನ್ನು ಸಹ ತೆರವುಗೊಳಿಸುವಂತೆ ಕೋರಿದರು. ಹಾಗೂ ವಾರ್ಡ್ ಅಭಿಯಂತರರನ್ನು ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರನ್ನು ಯಾವುದಾದರೂ ಒಂದು ದಿನ ಸ್ವಲ್ಪ ಸಮಯ ಬಿಡುವು ಮಾಡಿಕೊಂಡು ಎಂ.ಡಿ. ಬ್ಲಾಕ್ ಪ್ರದೇಶಕ್ಕೆ ಬಂದಲ್ಲಿ ಸದರಿ ಪ್ರದೇಶದಲ್ಲಿರುವ ಸಮಸ್ಯೆಗಳನ್ನು ತಿಳಿಸುವುದಾಗಿ ಕೋರಿದರು. ಈ ಬಗ್ಗೆ ವಾರ್ಡ್ ಅಭಿಯಂತರರು ಮಾತನಾಡಿ ಪ್ರತಿ ದಿನ ವಾರ್ಡ್ ವ್ಯಾಪ್ತಿಯಲ್ಲಿರುವ ಎಲ್ಲಾ ಪ್ರದೇಶಗಳಿಗೂ ಸಹ ಬೇಟಿ ನೀಡಿ ಸಮಸ್ಯೆಗಳ ಬಗೆಹರಿಸುತ್ತಿರುವ ಬಗ್ಗೆ ತಿಳಿಸಿ ಎಂ.ಡಿ. ಬ್ಲಾಕ್ ಪ್ರದೇಶಕ್ಕೆ ಸಂಬಂಧಪಟ್ಟಂತೆ ತಮಗೆ ತಿಳಿದು ಬರುವ ಸಮಸ್ಯೆಗಳ ಬಗ್ಗೆ ತಿಳಿಸಿದ್ದಲ್ಲಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

**ಕ್ರಮ: ವಾರ್ಡಿನ ಅಭಿಯಂತರರು ಹಿರಿಯ ಆರೋಗ್ಯ ಪರಿವೀಕ್ಷರು**

6. ವಾರ್ಡ್ 153ರ ಸ್ಥಳೀಯರು ಹಾಗೂ ಬಿ.ಹೆಚ್.ಇ.ಎಲ್ ವೆಲ್‌ಫೇರ್ ಅಸೋಸಿಯೇಷನ್‌ನ ಕಾರ್ಯದರ್ಶಿಗಳಾದ ಶ್ರೀ. ಜಯಕೃಷ್ಣ ರವರು ಸದರಿ ಬಡಾವಣೆಯ ಸಮಸ್ಯೆಗಳ ಮನವಿ ಪತ್ರವನ್ನು ನೋಡಲ್ ಅಧಿಕಾರಿಯವರಿಗೆ ಸಲ್ಲಿಸಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಸದರಿ ಮನವಿ ಪತ್ರವನ್ನು ವಾರ್ಡ್ ಅಭಿಯಂತರರಿಗೆ ನೀಡಿ, ಪತ್ರದಲ್ಲಿರುವ ಮನವಿ/ದೂರುಗಳನ್ನು ಪರಿಶೀಲಿಸಿ ಸಂಬಂಧಪಟ್ಟ ಇಲಾಖೆಗೆ ಪತ್ರ ಬರೆದು ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

**ಕ್ರಮ : ವಾರ್ಡ್ ಅಭಿಯಂತರರು**

7. ನೋಡಲ್ ಅಧಿಕಾರಿಯವರು ಮಾತನಾಡಿ ಕೋವಿಡ್ ಪ್ರಕರಣಗಳು ದಿನೇ ದಿನೇ ಹೆಚ್ಚಾಗುತ್ತಿದ್ದು, ಈ ಬಗ್ಗೆ ಮುನ್ನೆಚ್ಚರಿಕಾ ಕ್ರಮಗಳನ್ನು ವಹಿಸುವಂತೆ ಸಂಬಂಧಪಟ್ಟ ಎಲ್ಲಾ ಇಲಾಖೆಯವರು ಸೂಕ್ತ ಕ್ರಮ ವಹಿಸುವಂತೆ ಸೂಚನೆ ನೀಡಿದರು. ಈ ವಿಷಯವಾಗಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ ವರ್ಗದವರು ಗಮನ ಹರಿಸುವುದಾಗಿ ತಿಳಿಸಿದರು.



Scanned with CamScanner

ಮೇಲಿನ ಎಲ್ಲಾ ಅಂಶಗಳನ್ನು ಕ್ರಮಬದ್ಧವಾಗಿ ನಿರ್ವಹಿಸಲು ಹಾಜರಿದ್ದ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ತಿಳಿಸಿ ಮುಂದಿನ ಸಭೆಗೆ ಕಡ್ಡಾಯವಾಗಿ ಗೈರುಹಾಜರಾಗಿರುವ ಇತರೆ ಇಲಾಖೆಯವರು ಪಾಲ್ಗೊಂಡು ಮಾನ್ಯ ಆಯುಕ್ತರು (ಬಿಬಿಎಂಪಿ) ರವರು ವಹಿಸಿರುವ ಜವಾಬ್ಧಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಎಲ್ಲರೂ ಸಹಕರಿಸಬೇಕೆಂದು ತಿಳಿಸುತ್ತಾ ಸಭೆ ಮುಕ್ತಾಯಗೊಳಿಸಲಾಯಿತು.

(ನವೀನ್‌ಕುಮಾರ್ ಕೆ.)
ಕಾರ್ಯದರ್ಶಿ
ವಾರ್ಡ್–153 ಜಯನಗರ

(ವರಲಕ್ಷ್ಮಮ್ಮ ಎಲ್)
ನೋಡಲ್ ಅಧಿಕಾರಿ
ವಾರ್ಡ್–153 ಜಯನಗರ



Scanned with CamScanner